ಮಾತ್ರ ಪ್ರೀತಿಸಬಲ್ಲೆ, ಅವನೊಂದಿಗೆ ಮಾತ್ರ ಇರಬಲ್ಲೆ, ಅವನೊಂದಿಗೆ ಮಾತ್ರ ಮಲಗಬಲ್ಲೆ. ಇದಕ್ಕೆ ರಿತಿಕ್ ನನಗೆ ನನ್ನ ನಡತೆಯ ಬಗ್ಗೆ ವ್ಯಂಗ್ಯದ ಮಾತುಗಳನ್ನಾಡುತ್ತಿದ್ದ. ಸ್ವತಂತ್ರವಾಗಿರಲು ಬಯಸುವ ಹೆಣ್ಣನ್ನು ಸದಾ ಸಂದೇಹದ ದೃಷ್ಟಿಯಲ್ಲಿ ನೋಡಲಾಗುತ್ತದೆ. ರಿತಿಕ್ ಸಹ ನನ್ನನ್ನು ಸಂದೇಹದ ದೃಷ್ಟಿಯಿಂದ ನೋಡಲಾರಂಭಿಸಿದ್ದ.

ನಾನು ಅವನ ವಿಧಿವತ್ತಾದ ಬಂಧನದಲ್ಲಿರಲಿಲ್ಲ, ಹೀಗಾಗಿ ನಾನು ಯಾವಾಗ ಬೇಕಾದರು ಅವನನ್ನು ತ್ಯಜಿಸಬಹುದು ಎಂದು ಅವನು ಭಯಪಡುತ್ತಿದ್ದ. ಅವನು ನನಗೆ ಸದಾ ನಡತೆಯ ಬಗ್ಗೆ ಹೇಳುತ್ತಿದ್ದ, ಇದರಿಂದಾಗಿ ನಾನು ಉತ್ತೇಜಿತಳಾಗಿ, ರೇಗಿ ನಮ್ಮ ಪಾರಸ್ಪರಿಕ ಸಂಬಂಧಗಳನ್ನು ಪಾಲಿಸುತ್ತಿರಬೇಕು ಎಂಬುದು ಅವನ ಆಶಯವಾಗಿತ್ತು. ನಾವು ಈ ಹಾದಿಯನ್ನು ಆರಂಭದಿಂದಲೇ ಆಯ್ಕೆ ಮಾಡಿಕೊಂಡಿರಲಿಲ್ಲವಲ್ಲ! ನಾನು ಈ ಮನೆಯ ಹೊಸ್ತಿಲನ್ನು ದಾಟುವ ಬಗ್ಗೆ ಎಂದೂ ಯೋಚಿಸುತ್ತಿರಲಿಲ್ಲ. ಆದರೆ ಇಂದು ರಿತಿಕ್ ನಾನು ಈ ಮನೆಯನ್ನು ಬಿಟ್ಟು ಹೋಗಲು ಅಥವಾ ನಾನೇ ಅವನನ್ನು ಈ ಮನೆಯಿಂದ ಹೊಡೆದೋಡಿಸಲು ವಿವಶಗೊಳಿಸಿದ. ಆದರೆ ನಾನು ಅವನನ್ನು ಹೊಡೆದೋಡಿಸುವ ಬದಲು ನಾನೇ ಈ ಮನೆಯಿಂದ ಹೊರಹೋಗಲು ಇಷ್ಟಪಡುತ್ತಿದ್ದೇನೆ. ಈ ಮನೆಯ ನೋಂದಣಿಯಿಂದ ನನ್ನ ಪಾಲುದಾರಿಕೆಯನ್ನು ರದ್ದುಪಡಿಸಿಕೊಳ್ಳುತ್ತೇನೆ. ಅವನು ಬೇಕಾದರೆ ಮನೆಯನ್ನು ಸಂಪೂರ್ಣವಾಗಿ ಅವನ ಹೆಸರಿಗೆ ಮಾಡಿಸಿಕೊಳ್ಳಲಿ ಅಥವಾ ಬೇರೆಯವರ ಹೆಸರಿಗೆ ಮಾಡಿಸಲಿ, ನನಗೂ ಅದಕ್ಕೂ ಸಂಬಂಧವಿರುವುದಿಲ್ಲ. ಈ ಮನೆಯನ್ನು ಖರೀದಿಸುವಲ್ಲಿ ನನ್ನ ಶ್ರಮದ ಹಣವನ್ನು ಹಾಕಿದ್ದೇನೆ, ಆದರೆ ನನಗೆ ಈ ಆರ್ಥಿಕ ಆಘಾತ ಒಪ್ಪಿಗೆಯಿದೆ. ನಾನು ರಿತಿಕ್‌ನೊಂದಿಗೆ ವಿವಾಹವಾಗಿಲ್ಲ ಎಂಬುದು ನನಗೆ ತಿಳಿದಿದೆ. ನಾನು ಅವನಿಂದ ಬೇರೆಯಾದರೆ, ಅವನಿಂದ ನನಗೆ ಜೀವನಾಂಶ ಸಿಗುವುದಿಲ್ಲ ಎಂಬುದು ಸಹ ನನಗೆ ತಿಳಿದಿದೆ. ಅದು ನನಗೆ ಬೇಡವೇ ಬೇಡ. ನಾನು ನನ್ನ ಜೀವನವನ್ನು ನನ್ನ ನೌಕರಿಯಿಂದ ಸಿಗುವ ವೇತನದಿಂದ ಸಾಗಿಸಲು ಸಮರ್ಥಳಾಗಿದ್ದೇನೆ.



ರಿತಿಕ್ ನನ್ನನ್ನು 'ಇಟ್ಟುಕೊಂಡವಳು' ಎಂದಿದ್ದು ನನಗಿಂದೂ ಸಹ ನಂಬಲಾಗುತ್ತಿರಲಿಲ್ಲ. 'ನಾನು ನಿನ್ನ ಶರ್ಟ್‌ಗೆ ಗುಂಡಿ ಹಾಕಲು ಆಗಲಿಲ್ಲ' ಎಂದು ಮಾತ್ರ ನಾನು ಅವನಿಗೆ ಹೇಳಿದ್ದೆ.

'ಹೂಂ, ನೀನೇಕೆ ಹಾಕ್ತೀಯ? ಇದು ಹೆಂಡತಿಯರ ಕೆಲಸ', ರಿತಿಕ್ ಗೇಲಿ ಮಾಡಿದ್ದ.

'ಹಾಗೇನಿಲ್ಲ. ನಾನು ಮರೆತಿದ್ದೆ.'

'ಓಹೋ, ಈಗ ನೀನು ನನ್ನ ಕೆಲಸಗಳನ್ನು ಮರೆಯುತ್ತಿದ್ದೀಯ.'

ಹಾಗೇನಿಲ್ಲ ಅಂತ ಹೇಳಿದೆನಲ್ಲ, ಯಾರೂ ಬೇಕಂತಲೇ ಮರೆಯುವುದಿಲ್ಲ', ನನಗೆ ರಿತಿಕ್‌ನ ವ್ಯಂಗ್ಯದ ಮಾತಿನಿಂದ ಗಾಬರಿಯಾಗಿತ್ತು.

'ಈಚೆಗೆ ನೀನು ಬೇರೆಯವರ ಶರ್ಟಿಗೆ ಬಟನ್ ಹಾಕ್ತಿಲ್ಲ ತಾನೇ?' ರಿತಿಕ್‌ಗೆ ಏನಾಗಿತ್ತೋ ತಿಳಿಯದು.

'ವ್ಹಾಟ್ ನಾನ್‌ಸೆನ್ಸ್'

'ನೋ! ಐ ಯಾಮ್ ಇನ್ ಸೆನ್ಸ್'

'ವ್ಹಾಟ್?'

'ಎಸ್! ಡೆಡ್ಲಿ ಎಸ್', ರಿತಿಕ್ ಒರಟಾಗಿ ಹೇಳಿದ್ದ. ಇದಕ್ಕೂ ಮೊದಲು ಅವನು ನನ್ನೊಂದಿಗೆ ಹೀಗೆ ಮಾತನಾಡಿರಲಿಲ್ಲ.

'ಹೌ ಡೇರ್ ಆರ್ ಯೂ! ನಾನು ನಿನ್ನನ್ನು ಬಿಟ್ಟು ಬೇರೆಯವರ ಸುಳಿಯಲ್ಲಿದ್ದೇನೆ ಎಂದು ನೀನು ಯೋಚಿಸುತ್ತಿದ್ದೀಯ?'

'ಹೀಗೆ ಮಾಡಲು ನೀನು ಸ್ವತಂತ್ರಳಾಗಿದ್ದೀಯ, ನಿನಗೆ ಬೇರೆ ಕಡೆ ಒಲವಿರಬಹುದು, ಯಾರಿಗೆ ಗೊತ್ತು? ಆ ನಮನ್ ಕಥೆಯನ್ನು ನೀನೇ ಹೇಳಿದ್ದೀಯ.'

'ಅದು ನಿನ್ನನ್ನು ಭೇಟಿಯಾಗುವುದಕ್ಕೂ ಮೊದಲಿನ ಕಥೆ. ಅವನಲ್ಲಿ ಅಷ್ಟು ಆತ್ಮೀಯತೆ ಇರಲಿಲ್ಲವೆಂದು ನಾನು ಮೊದಲೇ ನಿನಗೆ ಹೇಳಿದ್ದೇನೆ.'

'ಈಗ ಯಾರೊಂದಿಗೆ ಆತ್ಮೀಯತೆ ಇದೆ?'

'ತಮಾಷೆ ಮಾಡ್ತಿದ್ದೀಯ?'

'ಇಲ್ಲ'

'ಓಹ್, ನೀನು ಹೀಗೆ ಯೋಚಿಸುವುದಾದರೂ ಹೇಗೆ?'

'ನಾನು ಯೋಚಿಸುವ ಮಾತು ಬಿಡು. ಒಂದು ವೇಳೆ ನೀನು ಬೇರೆಯವನೊಂದಿಗೆ ಸ್ನೇಹ ಬೆಳೆಸಿಕೊಂಡಿದ್ದರೆ, ನಾನು ನಿನ್ನನ್ನು ತಡೆಯಲಾರೆ.'

'ಏಕೆ ತಡೆಯಲಾರೆ?'

'ಹೆಂಡತಿಯನ್ನು ತಡೆಯಬಹುದು, ಇಟ್ಟುಕೊಂಡವಳನ್ನು...' ರಿತಿಕ್ ಮುಂದಕ್ಕೆ ಮಾತನಾಡಲಿಲ್ಲ.

'ಹಾಗಾದ್ರೆ ಇದು ನಿನ್ನ ಮನಸ್ಸಿನ ಸತ್ಯ', ನನಗೆ ಆಶ್ಚರ್ಯವಾಗಿತ್ತು.

'ಇದನ್ನು ನಾನು ಹೇಳಲು ಬಯಸುತ್ತಿರಲಿಲ್ಲ. ಕೇಳು...' ರಿತಿಕ್ ತಡಬಡಿಸಿದ. ಅವನು ನನಗೆ ತಿಳಿಯಪಡಿಸಲು ಮುಂದಕ್ಕೆ ಬಂದು ನನ್ನೆರಡೂ ಭುಜಗಳನ್ನು ಹಿಡಿದ. ನಾನು ನನ್ನ ಶಕ್ತಿಮೀರಿ ಅವನನ್ನು ತಳ್ಳಿದೆ. ರಿತಿಕ್ ತಡಬಡಿಸಿದ. ನಾನು ವಾಶ್‌ರೂಮಿಗೆ ಓಡಿ ಹೋಗಿ ಬಾಗಿಲನ್ನು ಮುಚ್ಚಿದ್ದೆ. ನಾನಲ್ಲಿಯೇ ಇದ್ದಿದ್ದರೆ ಅವನ ಮೇಲೆ ಆಕ್ರಮಣ ಮಾಡುತ್ತಿದ್ದೆ. ರಿತಿಕ್ ವಾಶ್‌ರೂಮಿನ ಬಾಗಿಲನ್ನು ಬಡಿಯುತ್ತಿದ್ದ, ನನ್ನನ್ನು ಕರೆಯುತ್ತಿದ್ದ. ನಾನು ರೋದಿಸುತ್ತಿದ್ದೆ. ನನಗೆ ಮೊದಲ ಬಾರಿಗೆ, ನಾನು ಒಡೆದು ಚೂರುಚೂರಾದೆ ಎಂದು ಅನ್ನಿಸಿತು. ಸಂಬಂಧಗಳ ಸ್ವಾತಂತ್ರ್ಯದ ಹೆಸರಿನಲ್ಲಿ ಹೆಣ್ಣೇ ಏಕೆ ಮೋಸ ಹೋಗುತ್ತಾಳೆ ಎಂದು ನನ್ನನ್ನು ನಾನೇ ಕೇಳಿಕೊಳ್ಳುತ್ತಿದ್ದೆ. ಪುರುಷರಿಗೆ ಮಹಿಳೆಯರ ಪ್ರೀತಿಸಂಬಂಧಗಳಲ್ಲಿ ಮೂಗು ತೂರಿಸುವ ಕೊಳಕು ಅಭ್ಯಾಸವಿರುತ್ತದೆ. ಮೊದಲು ತುಂಬಾ ಪ್ರೀತಿಯಿಂದ ನಮ್ಮನ್ನೇ ನಮ್ಮ ಪ್ರೀತಿಸಂಬಂಧಗಳ ಬಗ್ಗೆ ಕೇಳುತ್ತಾರೆ, ನಂತರ ಜೀವಮಾನವಿಡೀ ಅದರ ಬಗ್ಗೆಯೇ ಚುಚ್ಚು ಮಾತುಗಳನ್ನಾಡುತ್ತಾರೆ. ಯಾವ ಸಂಬಂಧಗಳನ್ನು ಮಹಿಳೆಯರಾದ ನಾವು ಮರೆತು ಬಿಟ್ಟಿರುತ್ತೇವೆಯೋ, ಪುರುಷರು ಅದೇ ಸತ್ತ ಸಂಬಂಧಗಳ ಶವವನ್ನು ತಮ್ಮ ಹೆಗಲುಗಳ ಮೇಲೆ ಹೊತ್ತು ಅಲೆದಾಡುತ್ತಾರೆ.

ಈಗ ರಿತಿಕ್ ಕಚೇರಿಗೆ ಹೋಗಿದ್ದಾನೆಂದು ಅನ್ನಿಸಿದ ನಂತರ ನಾನು ವಾಶ್‌ರೂಮಿನ ಬಾಗಿಲನ್ನು ತೆರೆದೆ. ನಂತರ ಹೊರಬಂದು ನನಗೆ ಅವಶ್ಯವಿದ್ದ ಲಗ್ಗೇಜುಗಳನ್ನು ಮಾತ್ರ ಅಂದರೆ ಕೆಲವು ಬಟ್ಟೆಗಳು, ಟೂತ್‌ಬ್ರಶ್, ಹೇರ್ ಬ್ರಶ್, ಬೆಡ್‌ಶೀಟ್, ದಿಂಬಿನ ಕವರ್ ಇತ್ಯಾದಿಗಳನ್ನು ಪ್ಯಾಕ್ ಮಾಡಲಾರಂಭಿಸಿದೆ. ನನ್ನ ಬೆಡ್‌ಶೀಟ್ ಮತ್ತು ದಿಂಬಿನ ಕವರ್ ಇಲ್ಲದೆ ನನಗೆ ನಿದ್ರೆ ಬರುವುದಿಲ್ಲ ಎಂಬುದು ರಿತಿಕ್‌ಗೆ ಗೊತ್ತಿತ್ತು. ನನ್ನ ಕೆಲವು ವಸ್ತುಗಳನ್ನು ಪ್ಯಾಕ್ ಮಾಡಿಕೊಂಡ ನಂತರ ನನ್ನನ್ನು ನಾನೇ ಈ ಮನೆಯಿಂದ ಹಾಗೂ ಅವನಿಂದ ಮುಕ್ತಗೊಳಿಸಿಕೊಂಡು ಈ ಮನೆಯ ಹೊಸ್ತಿಲನ್ನು ದಾಟಿದ್ದೇನೆ. ಓಹ್! ಈ ಮನೆಯ ಹೊಸ್ತಿಲನ್ನು ದಾಟುವ ಬಗ್ಗೆ ನಾನೇಕೆ ಪದೇ ಪದೇ ಹೇಳುತ್ತಿದ್ದೇನೆ? ನಾನು ರಿತಿಕ್‌ನೊಂದಿಗೆ ಸಪ್ತಪದಿ ಸುತ್ತಿ, ಅವನನ್ನು ಅಗ್ನಿಸಾಕ್ಷಿಯಾಗಿ ಮದುವೆಯಾಗಿ, ಜೀವಮಾನವಿಡೀ ಅವನ ಮನೆಯ ಹೊಸ್ತಿಲನ್ನು ದಾಟುವುದಿಲ್ಲವೆಂದು ಮಾತು ಕೊಟ್ಟಿರಲಿಲ್ಲ.

ರಿತಿಕ್ ಬಹುಶಃ ಅರ್ಥ ಮಾಡಿಕೊಳ್ಳುವನೋ, ಇಲ್ಲವೋ... ಆದರೆ ನಾನು ಕಳೆದ ಐದು ವರ್ಷಗಳಲ್ಲಿ, ನಾವು ವಾಸಿಸುತ್ತಿರುವ ವಾತಾವರಣ ಖಂಡಿತವಾಗಿ ಕಸಬಾ ಮಾನಸಿಕತೆಯನ್ನು ಹೊಂದಿದೆ ಎಂಬುದನ್ನು ಮನಗಂಡಿದ್ದೇನೆ. ಇಲ್ಲಿ ಒಬ್ಬ ಪುರುಷ, ಒಬ್ಬ ಮಹಿಳೆಗೆ ಸ್ವಾತಂತ್ರ್ಯವನ್ನು ಕೊಡಲಾರ; ಒಬ್ಬ ಮಹಿಳೆ, ಬೇರೆ ಮಹಿಳೆಯ ಸ್ವಾತಂತ್ರ್ಯವನ್ನು ನೋಡಲಾರಳು. ಸ್ತ್ರೀಮುಕ್ತಿಯ ಪ್ರಶ್ನೆ ಬಂದಾಗ ನಾನು ಸಹ ಸಿಮೋನ್‌ದ ಬೋವುವಾರ್ ಆಗುತ್ತೇನೆ. ಒಮ್ಮೆ ಮೃದುಲ್ ಸಹ, ನೀವು ಸಿಮೋನ್‌ನಂತೆ ಎಂದು ಟಿಪ್ಪಣಿ ಮಾಡಿದ್ದ. ಹಾಂ, ನಾನು ಒಬ್ಬ ಕಸಬಾ ಹೆಣ್ಣು, ಕಸಬಾ ಸಿಮೋನ್‌ದ ಬೋವುವಾರ್... ಆದರೆ ರಿತಿಕ್ ತನ್ನನ್ನು ಯಾವ ರೂಪದಲ್ಲಿ ನೋಡಿಕೊಳ್ಳುತ್ತಾನೆ; ಒಂದು ವೇಳೆ ಅವನು ನನ್ನನ್ನು ಮತ್ತೆ ತನ್ನ ಬಳಿಗೆ ಕರೆಸಿಕೊಳ್ಳಲು ಬಯಸಿದರೆ, ಅವನು ಮೊದಲು 'ಇಟ್ಟುಕೊಂಡವಳು' ಶಬ್ದವನ್ನು ಅವನ